ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 71-75
©*IIMRD*, Mysuru

IIMRD JOURNALS

www.iimrd.com

# ಶಾಸನಗಳ ಹಿನ್ನಲೆಯಲ್ಲಿ ಹೆಗ್ಗಡದೇವನಕೋಟೆ ಪ್ರದೇಶದ ವೃತ್ತಿಗಳು : ಒಂದು ಅಧ್ಯಯನ

**ಡಾ.ಮೋಹನ.ಎಚ್.ಎಂ.***

**ಪೀಠಿಕೆ**

ಒಂದು ದೇಶದ ಅಭಿವೃದ್ಧಿ ಆ ದೇಶದ ಆರ್ಥಿಕ ಅಭಿವೃದ್ಧಿಯನ್ನು ಅವಲಂಭಿಸಿರುತ್ತದೆ. ಅಂದರೆ ಆರ್ಥಿಕ ಸದೃಡತೆ ಆ ದೇಶದ ಬೆನ್ನೆಲುಬು. ಹೀಗಾಗಿ ಆರ್ಥಿಕಾಭಿವೃದ್ಧಿಯ ಪಾತ್ರ ಆ ದೇಶದ ಅಮೂಲಾಗ್ರವಾದಂತಹ ಬೆಳವಣಿಗೆಗೆ ಪುಷ್ಟಿನೀಡುವಂತದ್ದು. ಈ ಹಿನ್ನೆಲೆಯಲ್ಲಿ ಕೌಟಿಲ್ಯನು ತನ್ನ ಗ್ರಂಥವಾದ ಅರ್ಥಶಾಸ್ತ್ರದಲ್ಲಿ ಕ್ರಿ.ಪೂ. 3ನೇ ಶತಮಾನದಲ್ಲಿಯೇ ರಾಜ್ಯದ ಆರ್ಥಿಕ ವ್ಯವಸ್ಥೆಯ ಮಹತ್ವವನ್ನು ಕುರಿತು ಸುದೀರ್ಘವಾದ ಚರ್ಚೆಯನ್ನು ಮಾಡಿದ್ದಾನೆ.[1] ಮಾನವನ ಸಮಾಜದಲ್ಲಿ ಸಂಘ ಜೀವಿಯಾಗಿ ಜೀವನವನ್ನು ನಡೆಸಲು ಆತನಿಗೆ ಬೇಕಾದ ಮೂಲಭೂತ ಸೌಕರ್ಯವನ್ನು ಪೂರೈಸಿಕೊಳ್ಳುವ ಸಲುವಾಗಿ ವೃತ್ತಿಯನ್ನು ಅವಲಂಬಿಸಿರುತ್ತಾನೆ. ಹೀಗಾಗಿ ಬದುಕಿನಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಮತೋಲವನ್ನು ಕಾಪಾಡುವ ಉದ್ದೇಶದಿಂದ ಆರ್ಥಿಕ ಕ್ಷೇತ್ರದಿಂದ ಹೆಚ್ಚು ಅಭಿವೃದ್ಧಿಯನ್ನು ನಿರ್ವಹಿಸಲು ಅನುಕೂಲಕರವಾಗುವಂತೆ ಒಂದಲ್ಲ ಒಂದು ಕಸುಬನ್ನು ಅವಲಂಬಿಸಬೇಕಾಗುತ್ತದೆ ಇದನ್ನೇ ವೃತ್ತಿ ಎನ್ನುತ್ತೇವೆ. ಈ ವೃತ್ತಿಯನ್ನು ಜಾತಿ ಆಧಾರಿತವಾಗಿ, ಕಸುಬು ಆಧಾರಿತವಾಗಿ, ಕುಲ ಆಧಾರಿತವಾಗಿ, ಸಮತೋಲನವನ್ನು ಕಾಪಾಡುವ ನಿಟ್ಟಿನಲ್ಲಿ ಮನುಷ್ಯ ತನ್ನನ್ನು ತಾನು ವೃತ್ತಿಗೆ ಅವಲಂಬಿತವಾಗಿ ಮಾಡಿಕೊಂಡಿರುತ್ತಾನೆ.[2] ಹೀಗಾಗಿ ವೃತ್ತಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಈ ತಾಲೂಕಿನಲ್ಲಿ ಕಂಡು ಬಂದಿವೆ, ಅವುಗಳಲ್ಲಿ ಕ್ರಿ.ಶ.1327ರ ಬಪ್ಪನಹಳ್ಳಿಯ ಶಾಸನವು ಕಣೆಯಾಳದ ಪೆರುಮಾಳೆದೇವರ ಮಗ ಹೆಗ್ಗಡೆದೇವನು ಬಪ್ಪನಹಳ್ಳಿಯನ್ನು 'ಪೆರುಮಾಲೆಪುರ' ಅಗ್ರಹಾರವನ್ನಾಗಿ ಮಾಡಿ 26 ವೃತ್ತಿಗಳನ್ನಾಗಿ ವಿಭಜಿಸಿ, ಅಲ್ಲಿಯ ಗೋಪಿನಾಥ ದೇವಾಲಯ ಹಾಗೂ ವಿವಿಧ ಬ್ರಾಹ್ಮಣರಿಗೆ ದತ್ತಿ ಬಿಟ್ಟ ವಿಚಾರವನ್ನು ದಾಖಲಿಸಿದೆ.[3] ಕ್ರಿ.ಶ.1346ರ ಸರಗೂರು ಶಾಸನವು ಮುಮ್ಮಡಿ ವಿಜಯ ಬುಕ್ಕರಾಯನ ಕಾಲದಲ್ಲಿ ಬಯಲುನಾಡ ಮಹಾಪ್ರಭುವಾದ ಮಸಣೆಯಹಳ್ಳಿಯ ಕಂಪಣಗೌಡನು ತನ್ನ ಶ್ರೇಯೋಭಿವೃದ್ಧಿಗಾಗಿ, ಬೆಳಗುಳದ ಶ್ರೀ ಗೊಮ್ಮಟನಾಥನ ಸೇವಾವಿಧಿಗೆಂದು ತೋಟಹಳ್ಳಿ ಗ್ರಾಮವನ್ನು ಸರ್ವ ಆದಾಯದೊಂದಿಗೆ ನಾಗಣ್ಣ ಒಡೆಯನಿಂದ ಖರೀದಿಸಿ ಗುಮ್ಮಟಪುರ ಎಂಬ ಅಭಿದಾನದೊಂದಿಗೆ ಅದನ್ನು ದತ್ತಿ ಬಿಟ್ಟ ಅಂಶವನ್ನು ಅರಹುತ್ತದೆ.[4] ಕ್ರಿ.ಶ.ಸು.14ನೇ ಶತಮಾನದ ಕ್ಯಾತನಹಳ್ಳಿಯ ಶಾಸನದಲ್ಲಿ ಮೂವರ ರಾಯರಗಂಡ ತಿಮ್ಮಣ್ಣನಾಯಕರ ಮನೆಯ ಅಕ್ಕಸಾಲಿಗೆನಾದ

---

** ಎಂ 12, ಹತ್ತನೇ ಅಡ್ಡರಸ್ತೆ, ಜೆಸಿಇ ಕಾಲೇಜು ಮುಂಬಾಗ, ಮಾನಸಗಂಗೋತ್ರಿ, ಮೈಸೂರು–06*

ಮಾರತಮ್ಮ ಮಲ್ಲಿನಾಥ ದೇವರಿಗೆ ಚೆನ್ನಿಗರ ಒಕ್ಕಲು 1, ಲಕ್ಷ್ಮೀ ನರಸಿಂಹ ದೇವರಿಗೆ 1, ಹೀಗೆ ಒಕ್ಕಲು ತನವನ್ನು ಬಿಟ್ಟಿರುವ ವಿಷಯವನ್ನು ತಿಳಿಸುತ್ತದೆ.[5]

ಕ್ರಿ.ಶ.1493 ಸರಗೂರು (ಚಾಮೇನಹಳ್ಳಿ) ತಾಮ್ರಶಾಸನವು ಸಾಳುವ ನರಸಿಂಹನ ಕಾಲಕ್ಕೆ ಸೇರಿದ್ದು ಮಲ್ಲನಾಯಕ ಹಾಗೂ ತಿಪ್ಪಾಂಬರು ಚಾಕೇನಹಳ್ಳಿಯನ್ನು ಅಗ್ರಹಾರವನ್ನಾಗಿಸಿ ದೇಮ ಸಮುದ್ರ ಎಂದು ಹೆಸರಿಟ್ಟು 40 ಮಂದಿ ಬ್ರಾಹ್ಮಣರಿಗೆ ದತ್ತಿ ನೀಡಿದ ವಿಷಯವನ್ನು ತಿಳಿಸುತ್ತದೆ. ಮತ್ತು ಕೆರೆಯನ್ನು ನಿರ್ಮಿಸಿದ್ದ ಬಗ್ಗೆ ತಿಳಿಸುತ್ತದೆ ಇದು ನಾಗಮಂಗಲ ತಾಲೂಕಿನಲ್ಲಿರುವ ಗ್ರಾಮವಾಗಿದೆ.[6] ಕ್ರಿ.ಶ.1499ರ ಸಾಗರೆ ಶಾಸನವು ಬಯಲುನಾಡಿನ ನರಸಣ್ಣನಾಯಕ ಒಡೆಯರ ಆಳ್ವಿಕೆ ಕಾಲದಲ್ಲಿ ಹೊರಟಿದ್ದು, ಬಯಲುನಾಡಿನ ಚರ್ತುವೇಧಿ ಮಂಗಲವಾದ ಸಾಗರೆಯ ವಿದ್ವಾನ್ ಮಹಾಜನಗಳು ತಮ್ಮ ಅಗ್ರಹಾರದ ತಾಮ್ರ ಶಾಸನವನ್ನು ಶಿವನ ಸಮುದ್ರದ ತಿಪ್ಪರಸಯ್ಯವರಿಗೆ ತೋರಿದ್ದರಿಂದ ತಿಪ್ಪರಸಯ್ಯನವರು ನರಸಣ್ಣನಾಯಕ ಒಡೆಯರಿಗೆ ಬಿನ್ನಹ ಮಾಡಿ ಅವರ ಆಜ್ಞೆ ಮೇರೆಗೆ ತಿಪ್ಪರಸಯ್ಯನವರು ಈ ಸಾಗರ ಗ್ರಾಮ 1 ಆ ಕಾಲುವಳಿ ಗ್ರಾಮದ ಸಲುವಾಗಿ ಬೀಚನಹಳ್ಳಿ ಗ್ರಾಮ ಕೂಡಿಕೊಂಡು ಎರಡರ ಚತುಸೀಮೆಗೆ (4 ದಿಕ್ಕಿಗೆ) ವಾಮನ ಮುದ್ರೆ ಹಾಕಿ ದಾನ ಬಿಟ್ಟಿರುವ ವಿಚಾರವನ್ನು ಈ ಶಾಸನ ತಿಳಿಸುತ್ತದೆ. ಕೊನೆಯಲ್ಲಿ ಶ್ರೀ ವಿರೂಪಾಕ್ಷ ಅಣೆಯೆಂದು ಉಲ್ಲೇಖಿಸಿದೆ.[7]

ಕ್ರಿ.ಶ.ಸು 14–15ನೇ ಶತಮಾನದ ತೊರವಳ್ಳಿಯ ಶಾಸನದಲ್ಲಿ ತಿಳಿಸಿರುವಂತೆ ಮಹಾಬಲೇಶ್ವರ ದೇವರಿಗೆ ದೇವರಾಯವೊಡೆಯರ ಧರ್ಮ ತೊರವಳ್ಳಿ ಶಾಸನ ಎಂದು ಉಲ್ಲೇಖಿತಗೊಂಡಿದೆ. ಈ ದೇವರಾಯ ಒಡೆಯ ಯಾರು? ಮತ್ತು ಈತ ಏನನ್ನು ದಾನ ನೀಡಿದ ಎಂಬುದು ಶಾಸನದಲ್ಲಿ ಇಲ್ಲ. ಮಹಾಬಲೇಶ್ವರ ದೇವರ ಉಲ್ಲೇಖಗೊಂಡಿರುವುದೇ ಶಾಸನದ ವಿಶೇಷತೆ.[8] ಕ್ರಿ.ಶ.1501ರ ಕೊಳಗಾಲದ ಶಾಸನದಲ್ಲಿ ರಾಮಲಿಂಗಕ್ಕೆ ರಾಯರ ಲೊಲುಪಾಯ್ಯ ಕರ್ತರಿಗೆ ಪೂಣ್ಯವಾಗಲೆಂದು ಉಮ್ಮತ್ತೂರು ಆಬ್ಯಾಚಾನ್ನು ಗ್ರಾಮವಾದ ಕೊಳಗಾಲವನ್ನು ರಾಮಲಿಂಗದೇವರ ಅಂಗ, ರಂಗ, ಭೋಗಕ್ಕೆ ದಾನ ನೀಡಿರುವ ವಿಷಯವನ್ನು ಈ ಶಾಸನವು ತಿಳಿಸುತ್ತದೆ.[9] ಕ್ರಿ.ಶ 1505 ಹೆಗ್ಗನೂರು ಶಾಸನವು ತಿಳಿಸುವಂತೆ ಚೋಳ ಪಾಂಡ್ಯ ಈ ಮೂವರ ರಾಯರಗಂಡ ಕೋಟೆಯ ಸಿಂಗಪ್ಪ ಒಡೆಯರ ಕುಮಾರ ಚನ್ನರಾಯ ಒಡೆಯರವರು ತಪಡಿಯ ತಿಮ್ಮಯ್ಯನಿಗೆ ಬಯಲುನಾಡ ಸ್ಥಳದ ಹೆಗ್ಗನೂರು ಗ್ರಾಮವನ್ನು ದಾನವಾಗಿ ನೀಡಿರುವ ವಿಷಯವನ್ನು ತಿಳಿಸುತ್ತದೆ.[10] ಕ್ರಿ.ಶ.1531/32ರ ನಲ್ಲೂರು (ಬೇಚಿರಾಕ್ ಗ್ರಾಮ) ಶಾಸನವು ವಿಜಯನಗರ ಅರಸ ಅಚ್ಯುತದೇವ ಮಹಾದೇವನ ಕಾಲದಲ್ಲಿ ಹೊರಟಿದ್ದು ಈತನು ಆಸ್ಥಾನದ ಒಡೆಯ ಮಾದವಯ್ಯನ ಕಾರ್ಯಕ್ಕೆ ಕರ್ತನಾದ ನಾಯಕರು ಕೋಟೆಸೀಮೆಯ ಹುರದ ಒಡೆಯರಿಗೆ ಬಯಲುನಾಡ ಪ್ರದೇಶಕ್ಕೆ ಸೇರಿದ ನಲ್ಲೂರು ಗ್ರಾಮವನ್ನು ದಾನನೀಡಿ ಆ ಗ್ರಾಮದ ಚತುಸೀಮೆಗೊಳಗಾದ ಅಷ್ಟಭೋಗ, ತೇಜಾಸ್ವಾಮ್ಯಗಳನ್ನು ನಿಮ್ಮ ಪುತ್ರಪೌತ್ರ ಪರಂಪರೆಯಾಗಿ ಅನುಭವಿಸಿ ಎಂದು ದಾನವನ್ನು ನೀಡಿರುವ ವಿವರವನ್ನು ಶಾಸನ ತಿಳಿಸುತ್ತದೆ.[11]

**ಕ್ರಿ.ಶ.**1559ರ ಕಳ್ಳಂಬಾಳು ಶಾಸನದಲ್ಲಿ ತಿಳಿಸುವಂತೆ ಹುರದ ಮಾಧವನಾಯಕರ ಮಕ್ಕಳು ದೊಡ್ಡಮಲ್ಲರಾಜ ಒಡೆಯರಿಗೆ ಪುಣ್ಯವಾಗಲೆಂದು ಮುಂದಿನ ಸಾಲು ತ್ರುಟಿತಗೊಂಡು ಅಸ್ಪಷ್ಟವಾದ

ಮಾಹಿತಿ ಇದೆ.[12] ಕ್ರಿ.ಶ.1573ರ ಬದನಗುಪ್ಪೆ ಶಾಸನದಲ್ಲಿ ಕೋಟೆ ಸೀಮೇಯ ದೇವ ಒಡೆಯರು ಬಯಲುನಾಡಿನ ಭೈರವ ದೇವರ ಅಷ್ಟವಿಭೂತಿ, ಅಮೃತಪಡಿಗೆ ಜಾಗಣಕೋಟೆಯ ಗ್ರಾಮವನ್ನು ಸರ್ವಮಾನ್ಯವಾಗಿ ಅವರು ಮತ್ತು ಅವರ ಮಕ್ಕಳು ಒಪ್ಪಿ ದಾನ ಮಾಡಿರುವ ವಿಷಯವನ್ನು ತಿಳಿಸುತ್ತದೆ.[13] ಕ್ರಿ.ಶ.ಸು.15–16ನೇ ಶತಮಾನದ ಹಯಿರಗೆಯ ಶಾಸನವು ಹೊರಟಿದ್ದು ಈ ಶತಮಾನದಲ್ಲೂ ಕೂಡ ನರಸಣ್ಣನಾಯಕರಿಗೆ ಧರ್ಮವಾಗಲೆಂದು ರಾಮಯ್ಯನವರಿಗೆ ಸರ್ವಮಾನ್ಯವಾಗಿ ಕೊಟ್ಟ ಎಂದಿದೆ ಮುಂದಿನ ಅಕ್ಷರಗಳು ತ್ರುಟಿತವಾಗಿದೆ.[14] ಕ್ರಿ.ಶ.ಸು.16ನೇ ಶತಮಾನದ ಬೇಗೂರು ಶಾಸನದಲ್ಲಿ ಉಲ್ಲೇಖಿಸುವಂತೆ ಚೇರ, ಚೋಳ, ಪಾಂಡ್ಯ ರಾಯರಗಂಡ ನೀಲಿಗಿರಿಯ ಸಾದರ ಸಿಂಗಪ್ಪ ಒಡೆಯರ ಮಕ್ಕಳು ಚೆನ್ನರಾಯ ಒಡೆಯರು ಕಂಚುಮಳ್ಳಿಯ ಕಟ್ಟಿಗೆಯ್ಯನ ಮಗ ರಾಮಲಿಂಗಯ್ಯನಿಗೆ ಬೇಗೂರನ್ನು ಹಾಗೂ ಗದ್ಯಾಣ 30 ಸುತ್ತಾ ಗೊತ್ತುಗೆಗೆ ದಾನ ಮಾಡಿರುವ ವಿಷಯವನ್ನು ತಿಳಿಸುತ್ತದೆ.[15] ಕ್ರಿ.ಶ.16ನೇ ಶತಮಾನದ ಮಟಕೆರೆ ಶಾಸನವು ತಿಳಿಸಿರುವಂತೆ ರಾಮನಾಥ ದೇವರಿಗೆ ಮಲಿಗೆಹಳ್ಳಿ ಶಿವನಪ್ಪಶೆಟ್ಟಿ ಕೊಟ್ಟ ತಾವರಕೆರೆ ಎಂದಿದೆ ಅಂದರೆ ರಾಮದೇವರಿಗೆ ಗದ್ದೆಯನ್ನು ದಾನ ಮಾಡುವ ವಿಚಾರವನ್ನು ಉಲ್ಲೇಖಿಸುತ್ತದೆ.[16] ಕ್ರಿ.ಶ.ಸು.16ನೇ ಶತಮಾನದ ಬೆಳತ್ತೂರು ಶಾಸನವು ತಿಳಿಸುವಂತೆ ಎರೆಮನಾಯಕರು ಮಲ್ಲಪ್ಪಗೌಡರಿಗೆ ಸೀಮೆಯ ಹಿತ್ತಲ ಹೊಲ, ಕುಂಬಿಯ ಹೊಲ, ಊರ ಮುಂದಣ ಸಾರಿಗೆ, ಶಾಸನದ ತೋಟದ ಗದ್ದೆ ಎಲ್ಲವನ್ನು ದಾನವಾಗಿ ಕೊಟ್ಟಿರುವ ವಿಷಯವನ್ನು ತಿಳಿಸುತ್ತದೆ.[17]

ಕ್ರಿ.ಶ.1663ರ ನೇರಳೆ ಶಾಸನವು ಮೈಸೂರು ಒಡೆಯರ ಕಾಲದಲ್ಲಿ ಹೊರಟಿದ್ದು ಶಾಸನದಲ್ಲಿ ಮೈಸೂರು ಸೀಮೆ ಎಂಬ ಹೆಸರು ಉಲ್ಲೇಖವಿರುವುದರಿಂದ ಮೈಸೂರು ಒಡೆಯರ ಕಾಲವೆಂದು ಹೇಳಬಹುದು ಮೈಸೂರು ಸೀಮೆಯ ಆಗತ್ತೂರು ಲಿಂಗೊಡೆಯರಿಗೆ ಸಲ್ಲುವ ಸರಗೂರು ಸ್ಥಳಕ್ಕೆ ಸಲ್ಲುವ ಕಣೆಯಲನಾಡ ನೆರಳೆ ಗ್ರಾಮವನ್ನು ದಾನ ಮಾಡಿರುವ ವಿಷಯವನ್ನು ತಿಳಿಸುತ್ತದೆ.[18] ಕ್ರಿ.ಶ.1669ರ ಹೊರಮರಳಿಯ ಶಾಸನವು ಮೈಸೂರು ಅರಸ ಆಳ್ವಿಕೆಯ ಕಾಲದಲ್ಲಿ ಹೊರಟಿದ್ದು ಅರಸನಾದ ದೇವರಾಜ ಒಡೆಯನವರು ಶ್ರೀರಂಗಪಟ್ಟಣ್ಣದ ಸಿಂಹಾಸನರೂಢರಾದ ಆಳ್ವಿಕೆ ಮಾಡುವ ಕಾಲದಲ್ಲಿ ದೇವರಾಜ ಒಡೆಯರ ಪುತ್ರರಾದ ಕಂಠೀರದ ಮಹೀಪಾಲಕರು (ಕಂಠೀರವ ನರಸಿಂಹ ಒಡೆಯರು) ಅತ್ರೇಯ ಗೊತ್ರದ ದ್ರಾಹ್ಯಾಯಣ ಸೂತ್ರದ ಸ್ವಾಮ್ಯಶಾಖೆಯ ಚಿಕ್ಕನಂಜುಂಡಭಟರ ಮೊಮ್ಮಗನಾದ ಸುಬ್ರಮ್ಮಣ್ಯ ಭಟರು ಮಗನಾದ ನಂಜಣ್ಣ ವಾರಣಾಸಿಗಳಿಗೆ ಹೊರಮರಳಿಪುರ ಗ್ರಾಮವನ್ನು ದಾನಕೊಟ್ಟ ವಿಚಾರವನ್ನು ಈ ಶಾಸನವು ತಿಳಿಸುತ್ತದೆ. ಅಂದರೆ ಮೈಸೂರು ರಾಜ್ಯದ ಕಾವೇರಿ ಮತ್ತು ಕಪಿಲಾ ಮಧ್ಯವರ್ತಿಯಾದ ಹೊಯ್ಸಳ ನಾಡಿಗೆ ಸಲ್ಲುವ ಕೊತ್ತಗಾಲಕ್ಕೆ ಸಲ್ಲುವ ಉಪಗ್ರಾಮವಾದ ಹೊರಮರಳಿಪುರವನ್ನು ಏಕಸೌಮ್ಯವದ ದಾನವನ್ನು ಕೊಟ್ಟು ಒಟ್ಟು 7 ಕಲ್ಲುಗಳನ್ನು ಹಾಕಿಸಿ ಗ್ರಾಮದ ಚತುಸೀಮೆಗೊಳಗಾದ ಅಷ್ಟಭೋಗ, ತೇಜಸ್ವಾಮ್ಯಗಳು ನಿಮಗೆ ಸಲ್ಲುವುದೆಂದು ದಾನ ನೀಡಿದ್ದಾರೆ. ಅಲ್ಲದೇ ಈ ಗ್ರಾಮಕ್ಕೆ ಸಲ್ಲುವ ಕರಗಳಾದ ಹೊಗೆ ಹಣ, ಮನೆಹಣ, ಮೂಟೆಸುಂಕ, ಮಗ್ಗ ಮೆಳಿದೆರಿಗೆ, ಜಾತಿಕೂಟ, ಕಾಣಿಕೆ, ಕಂದಾಯ, ಮದುವೆ ಸುಂಕ, ಚರಾದಾಯ ಇಷ್ಟು ತೆರಿಗೆಗಳು ಸಲ್ಲುದೆಂದು ದಾನ ನೀಡಿರುವ ವಿಷಯವನ್ನು ಉಲ್ಲೇಖಿಸುತ್ತದೆ.[19] ಕ್ರಿ.ಶ.1670ರ ಕಣ್ಣಿಯನಹುಂಡಿ ಹೊಸೂರು ಶಾಸನವು ಮೈಸೂರು ಅರಸ ಆಳ್ವಿಕೆಯ ಕಾಲದ ದೇವರಾಜ ಒಡೆಯನವರು ಶ್ರೀರಂಗಪಟ್ಟಣದಲ್ಲಿ ರಾಜ್ಯ ಸಿಂಹಾಸನ ರೂಢನಾಗಿ ಆಳ್ವಿಕೆ ಮಾಡುವ

ಸಂದರ್ಭದಲ್ಲಿ ಹೊರಡಿದೆ. ದೇವರಾಜ ಒಡೆಯರ ಮೊಮ್ಮಗನಾದ ಮತ್ತು ದೇವರಾಜ ಒಡೆಯರ ಮಗನಾದ ಕಂಠೀರವ ನರಸರಾಜ ಒಡೆಯನವರು ಕಾಮಾರಿನ ಗೌರಪ್ಪಯ್ಯ ಮೊಮ್ಮಕ್ಕಳಾದ ರಂಗುಪತ್ತಯ್ಯ ಆತನ ಪುತ್ರರಾದ ಬೆಟ್ಟಪ್ಪಯ್ಯನಿಗೆ ಕೊತ್ತಗಾಲದ ಒಳಿತದಲ್ಲಿರುವ ಬಿಳುಗಂಬ ಎಂಬ ಗ್ರಾಮಕ್ಕೆ ಪ್ರತಿನಾಮಧೇಯವಾಗಿ ಕಂಠಿರವಪುರ ಎಂಬ ಗ್ರಾಮವನ್ನು ಕಾಟೂರಿನ ಬೆಟ್ಟಯ್ಯನಿಗೆ ನೀಡಿರುವ ವಿಷಯವನ್ನು ಉಲ್ಲೇಖಿಸುತ್ತದೆ. ಹಾಗೂ ಕಂಠೀರವಪುರದ ಚಿಕ್ಕಬಂದಿಯನ್ನು ಸಹ ಉಲ್ಲೇಖಿಸುತ್ತದೆ. ನಾಲ್ಕು ಸೀಮೆಯೊಳಗಿನ ಕಂಠೀರವಪುರ ಗ್ರಾಮವನ್ನು ದಾನ ಗ್ರಾಮದ ಅಷ್ಟಭೋಗತೇಜ ಸೌಮ್ಯಗಳ ಸಹಿತವಾಗಿ ದಾನ ಮಾಡಿ ಈ ಕಂಠೀರವಪುರ ಗ್ರಾಮಕ್ಕೆ ಪೂರ್ವ–ದಕ್ಷಿಣ, ಪಶ್ಚಿಮ–ಉತ್ತರ ದಿಕ್ಕುಗಳಲ್ಲಿ ಒಟ್ಟು 16 ವಾಮನ ಮುದ್ರೆಕಲ್ಲು ನಡೆಸಿ ದಾನವನ್ನು ನೀಡಿದ ವಿಷಯವನ್ನು ಶಾಸನವು ತಿಳಿಸುತ್ತದೆ.[20]

ಕ್ರಿ.ಶ.1670ರ ಆಲನಹಳ್ಳಿಯ ಶಾಸನವು ಮೈಸೂರು ಒಡೆಯರ ಕಂಠೀರವ ನರಸರಾಜ ಒಡೆಯರ ಆಳ್ವಿಕೆಯಲ್ಲಿ ಹೊರಟಿದ್ದು ಒಡೆಯರ ಬಿಡಾರದ ವೆಂಕಟಯ್ಯನಿಗೆ 6 ವರಹದ ಬೆದ್ದಲು ಭೂಮಿಯನ್ನು ದಾನ ಮಾಡಲಾಗಿದೆ. ಕಾರಣ ವೆಂಕಯ್ಯನನ್ನು ಕಾಶಿಗೆ ಕಳುಹಿಸುವ ಸಲುವಾಗಿ ಈ ದಾನವನ್ನು ನೀಡಲಾಗಿದೆ. ಈ ಶಾಸನದ ಕೊನೆಯಲ್ಲಿ ಆಲನಹಳ್ಳಿ ಭೂಮಿ ಈ ದೇವರಾಜ ಎಂದು ಉಲ್ಲೇಖವಿದೆ.[21] ಕ್ರಿ.ಶ.ಸು.17ನೇ ಶತಮಾನದ ದೊಡ್ಡಕೆರೆಯೂರು (ಬೇಚಿರಾಕ್) ಶಾಸನದಲ್ಲಿ ಕೆರೆಯೂರಿನ ಚಂದ್ರನಾಥಸ್ವಾಮಿ ದೇವರಿಗೆ ತಿಪ್ಪರಸನವರು ದೇವರದಿವಿಗೆಗೆಂದು ಚೌಡಿಗೆ 1, ಕರು 1, ಸುಂಕ 4, 4 ಹಾಗ, 1 ಉಭಯಂಗಂ ಕೆಲವೊಂದು ತೆರಿಗೆಗಳನ್ನು ದೇವಾಲಯಕ್ಕೆ ದಾನ ನೀಡಿರುವ ವಿಚಾರವನ್ನು ಉಲ್ಲೇಖಿಸುತ್ತದೆ.[22] ಕ್ರಿ.ಶ.ಸು 17ನೇ ಶತಮಾನದ ಸರಗೂರಿನ ಈ ಶಾಸನವು ವ್ಯಾಸರಾಯರ ಮೊಮ್ಮಗನಾದ ರಾಮಚಂದ್ರಸ್ವಾಮಿಗೆ ಸೇವೆಯನ್ನು ಮಾಡಿದ ವಿಷಯವನ್ನು ತಿಳಿಸುತ್ತದೆ.[23] ಕ್ರಿ.ಶ.1816ರ ಶಂಕಹಳ್ಳಿ ಶಾಸನವು ಮೈಸೂರು ಕೃಷ್ಣರಾಜೊಡೆಯರ ಆಳ್ವಿಕೆ ಕಾಲದಲ್ಲಿ ಅರಮನೆಯ ಸಂಗೀತ ವಿದ್ವಾಂಸನಾದ ವೆಂಕಟಸುಬ್ಬಯ್ಯನವರಿಗೆ ಶಂಖಹಳ್ಳಿ ಗ್ರಾಮವನ್ನು ದಾನ ನೀಡಿದ ಉಲ್ಲೇಖವಿದೆ. ಈ ದಾನವನ್ನು ಅವರ ಮಕ್ಕಳು ಮೊಮ್ಮಕ್ಕಳು ಸೂರ್ಯಚಂದ್ರರು ಇರುವವರೆಗೆ ಅನುಭವಿಸುಕೊಂಡು ಇರುವಿರಿ ಎಂದು ದಾನ ನೀಡಿರುವ ಅಂಶವನ್ನು ತಿಳಿಸುತ್ತದೆ.[24] ಕ್ರಿ.ಶ.1818ರ ಚಕ್ಕೂರು ಶಾಸನವು ಮೈಸೂರು ಒಡೆಯರರಾದ ಕೃಷ್ಣರಾಜಒಡೆಯರ ಆಳ್ವಿಕೆ ಕಾಲದಲ್ಲಿ ಹೊರಟಿದ್ದು ಅರಮನೆಯ ವಿದ್ವಾಂಸನಾದ ವೆಂಕಟಸುಬ್ಬಯ್ಯನವರಿಗೆ ಚಕ್ಕೂರು ಗ್ರಾಮವೊಂದನ್ನು ಈ ಗ್ರಾಮಕ್ಕೆ ಸಲ್ಲುವ 4 ಗ್ರಾಮಗಳನ್ನು ಕೆರೆಯನ್ನು ಸಹಿತವಾಗಿ ದಾನವಾಗಿ ನೀಡಿರುವ ವಿಚಾರವನ್ನು ತಿಳಿಸುತ್ತದೆ.[25] ಕ್ರಿ.ಶ.1829ರ ನರಸೀಪುರ ಶಾಸನವು ಮೈಸೂರು ಒಡೆಯ ಶ್ರೀ ಕೃಷ್ಣರಾಜಒಡೆಯರ ಕಾಲದಲ್ಲಿ ಹೊರಟಿದ್ದು ಇದೊಂದು ದಾನ ಶಾಸನವಾಗಿದಲ್ಲಿ ದಳವಾಯಿ ಕೆರೆಗೆ ಒಂದು ಆನೆ ಬಂದು ತಪ್ಪಿಸಿಕೊಂಡು ಅಡವಿಗೆ ಹೋದ ಆನೆಯನ್ನು ಅಪ್ಪಣೆ ಮೇರೆಗೆ ಗುಂಡಿನಿಂದ ಹೊಡೆದು ರಾಜರಿಗೆ ಒಪ್ಪಿಸಿದ ಹೆಗ್ಗಡದೇವನಕೋಟೆ ಅಮಲುದಾರ ಶಾಂತಯ್ಯನ ಮಗ ದೇವಚಂದ್ರನಿಗೆ ಇನಾಮಾಗಿ ಅಪ್ಪಣೆ ಕೊಡಿಸಿ ತಾಲೂಕಿನ ಪೈಕಿ ನಗರ ಹೋಬಳಿ ಒಳಿತದ ನರಸಿಂಹಪುರ ಗ್ರಾಮದಲ್ಲಿ ಬೆದ್ದಲು ಖಂಡುಗ–12 ಸೊನ್ನೆ ವರಹದ ಭೂಮಿಗೆ 4 ದಿಕ್ಕಿಗೂ ಶಿಲೆ ಪ್ರತಿಷ್ಠೆ ಮಾಡಿಸಿ ಭೂಮಿಯನ್ನು ದಾನ ಮಾಡಿ 12 ವರಹದ ಬೆದ್ದಲು ಭೂಮಿಗೆ ಶಿಲೆ ಪ್ರತಿಷ್ಠೆ ಮಾಡಿ ದಾನನೀಡಿರುವ ವಿಚಾರವನ್ನು ತಿಳಿಸುತ್ತದೆ.[26]

**ಕೊನೆ ಟಿಪ್ಪಣಿಗಳು**

1. ಡಾ.ಚಿದಾನಂದಮೂರ್ತಿ.ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂ–1,
2. ಹಿರೇಮಠ ಬಿ.ಆರ್.– 1986, ಶಾಸನಗಳಲ್ಲಿ ಕರ್ನಾಟಕದ ವರ್ತಕರು,ಪು.7
3. ಎ.ಕ.ಸಂ–3.ಶಾ.ಸಂ–47. ಪುಟ ಸಂ–458
4. ಎ.ಕ.ಸಂ–3.ಶಾ.ಸಂ–91. ಪುಟ ಸಂ–499
5. ಎ.ಕ.ಸಂ–3.ಶಾ.ಸಂ–15. ಪುಟ ಸಂ–440
6. ಎ.ಕ.ಸಂ–3.ಶಾ.ಸಂ–89. ಪುಟ ಸಂ–483
7. ಎ.ಕ.ಸಂ–3.ಶಾ.ಸಂ–150. ಪುಟ ಸಂ–532
8. ಎ.ಕ.ಸಂ–3.ಶಾ.ಸಂ–70. ಪುಟ ಸಂ–471
9. ಎ.ಕ.ಸಂ–3.ಶಾ.ಸಂ–33. ಪುಟ ಸಂ–451
10. ಎ.ಕ.ಸಂ–3.ಶಾ.ಸಂ–111. ಪುಟ ಸಂ–507
11. ಎ.ಕ.ಸಂ–3.ಶಾ.ಸಂ–119. ಪುಟ ಸಂ–531–32
12. ಎ.ಕ.ಸಂ–3.ಶಾ.ಸಂ–75. ಪುಟ ಸಂ–473
13. ಎ.ಕ.ಸಂ–3.ಶಾ.ಸಂ–145. ಪುಟ ಸಂ–524
14. ಎ.ಕ.ಸಂ–3.ಶಾ.ಸಂ–40. ಪುಟ ಸಂ–454
15. ಎ.ಕ.ಸಂ–3.ಶಾ.ಸಂ–102. ಪುಟ ಸಂ–504
16. ಎ.ಕ.ಸಂ–3.ಶಾ.ಸಂ–42. ಪುಟ ಸಂ–455
17. ಎ.ಕ.ಸಂ–3.ಶಾ.ಸಂ–105. ಪುಟ ಸಂ– 505
18. ಎ.ಕ.ಸಂ–3.ಶಾ.ಸಂ–158. ಪುಟ ಸಂ–535
19. ಎ.ಕ.ಸಂ–3.ಶಾ.ಸಂ–17. ಪುಟ ಸಂ–442–43
20. ಎ.ಕ.ಸಂ–3.ಶಾ.ಸಂ–16. ಪುಟ ಸಂ–440–41
21. ಎ.ಕ.ಸಂ–3.ಶಾ.ಸಂ–13. ಪುಟ ಸಂ–438–39
22. ಎ.ಕ.ಸಂ–3.ಶಾ.ಸಂ–11. ಪುಟ ಸಂ–437–38
23. ಎ.ಕ.ಸಂ–3.ಶಾ.ಸಂ–95. ಪುಟ ಸಂ–501
24. ಎ.ಕ.ಸಂ–3.ಶಾ.ಸಂ–27. ಪುಟ ಸಂ–448
25. ಎ.ಕ.ಸಂ–3.ಶಾ.ಸಂ–37.ಪುಟ ಸಂ–453
26. ಎ.ಕ.ಸಂ–3.ಶಾ.ಸಂ–118. ಪುಟ ಸಂ–534